(ಇಂದು ದಿನಾಂಕಃ 06–08–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಐ ಎಂ ಕೆ ವಕೀಲರಿಂದ ಃ-

ದಿನಾಂಕ 06-08-2024 ರಂದು ಆದ ಆದೇಶದನ್ವಯ ನಾನು ಸಲ್ಲಿಸಿರುವ ದಾಖಲೆಗಳನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಕ್ರಮವಾಗಿ ಈ ಕೆಳಗಿನಂತೆ ಗುರುತಿಸಲಾಗಿದೆ.

1) ಛಾಯಾಚಿತ್ರಗಳನ್ನು ಹಾಜರು ಪಡಿಸಿದ್ದು ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿ.ಪಿ.20 ರಿಂದ ನಿ.ಪಿ.48 ಎಂದು ಗುರುತಿಸಲಾಯಿತು.

2) ನೀರು ಸರಬರಾಜಿಗೆ ಹಣ ತುಂಬಿದ ಬಗ್ಗೆ ಪಾವತಿಯನ್ನು ಕ್ರಮವಾಗಿ ನಿ.ಪಿ.49 ರಿಂದ ನಿ.ಪಿ.52 ಎಂದು ಗುರುತಿಸಲಾಯಿತು.

3) 06 ವಿದ್ಯುತ ಬಿಲ್‌ಗಳನ್ನು ಕ್ರಮವಾಗಿ ನಿ.ಪಿ.53 ರಿಂದ ನಿ.ಪಿ.58 ಎಂದು ಗುರುತಿಸಲಾಯಿತು.

4) 02 ಅಣುಕು ಮುದ್ರೆಗಳನ್ನು ಮು.ಮಾಲು 01 ಮತ್ತು ವ.ಮಾಲು 02 ಎಂದು ಗುರುತಿಸಲಾಯಿತು.

5) ದಿನಾಂಕ 18-05-2002 ರ ಖರೀದಿ ಕರಾರು ಪತ್ರ ಇದ್ದು( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸದರಿ ದಾಖಲೆಗೆ ನೋಂದಣಿ ಆಗದೇ ಇದ್ದ ಕಾರಣ ಗುರುತಿಸಲು ತಕರಾರು ಮಾಡಿದ್ದರಿಂದ ಸದರಿ ದಾಖಲೆಯ ಬಗ್ಗೆ ಗುರುತಿಸಲು ನ್ಯಾಯಾಲಯದ ಆದೇಶದ ಅವಶ್ಯಕತೆ ಇದ್ದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದುಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**